# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 22
ಪಿಡಬ್ಲ್ಯೂ: 02

<u>ನ್ಯಾಯಾಲಯದ ಪ್ರಶ್ನೇಗಳು.</u>

ನಿನ್ನ ಹೆಸರು ಏನು? ಭರತ್

ನಿನ್ನ ಅಪ್ಪನ ಹೆಸರುಏನು ? ನಾರಪ್ಪ

ನಿನ್ನ ಅಮ್ಮನ ಹೆಸರು ಏನು ? ಸುಮಮ್ಮ

ನೀನು ಯಾವ ಊರಿನಿಂದ ಬಂದಿರುವೆ ? ಕೊಣನೂರಿನಿಂದ

ಯಾರ ಜೊತೆಗೆ ಬಂದೆ ? ತಾತ ಮತ್ತು ಅಜ್ಜಿ ಜೊತೆ ಬಂದಿದ್ದೇನೆ.

ತಾತನ ಹೆಸರು ಏನು ? ರಾಜಪ್ಪ

ಅಜ್ಜಿಯ ಹೆಸರು ಏನು ? ರೇಖಮ್ಮ

ನೀನು ಶಾಲೆಗೆ ಹೋಗುತ್ತೀಯಾ? ಶಿಶು ವಿಹಾರಕ್ಕೆ ಹೋಗುತ್ತೇನೆ.

ಯಾವ ಊರಲ್ಲಿ ಹೋಗುತ್ತೀಯಾ ? ಕೊಣನೂರಿನಲ್ಲಿ ಹೋಗುತ್ತಿದ್ದೇನೆ.

ಮನೆಯಲ್ಲಿ ಯಾರು ಯಾರು ಇರುತ್ತೀರಿ? ನಾನು, ಅಜ್ಜಿ ಮತ್ತು ತಾತ ಇರುತ್ತೇವೆ.

ನಿನ್ನ ಜೊತೆ ಆಟವಾಡಲು ಯಾರು ಬರುತ್ತಾರೆ? ದೀಪಕ್ ಬರುತ್ತಾನೆ

ದೀಪಕ್ ನ ಮನೆ ಎಲ್ಲಿ ಇದೆ ? ಕೋಣನೂರಿನಲ್ಲಿದೆ

ನಿನ್ನ ಅಮ್ಮ ಸುಮಮ್ಮ ಎಲ್ಲಿ ? ಗೊತ್ತಿಲ್ಲ

ಅಪ್ಪ ನಾರಪ್ಪ ಎಲ್ಲಿ ? ಗೊತ್ತಿಲ್ಲ

ಈಗ ಎಲ್ಲಿಗೆ ಬಂದಿರುವೆ? ಕೊರ್ಟಿಗೆ ಬಂದಿದ್ದೇನೆ

ಯಾಕೆ ಬಂದಿರುವೆ? ಗೊತ್ತಿಲ್ಲ

ಮೇಲೆ ಹೇಳಿದ ಪ್ರಶ್ನೋತ್ತರಗಳಿಂದ ಸಾಕ್ಷಿ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರ ನೀಡಬಲ್ಲ ಎಂದು ಕಂಡು ಬಂದಿದ್ದರಿಂದ ಸಾಕ್ಷಿಯ ವಿಚಾರಣೆ ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು. ಮೇಲ್ನೋಟಕ್ಕೆ ಸಾಕ್ಷಿಯ ವಯಸ್ಸು 12ಕ್ಕಿಂತ ಕಡಿಮೆ ಎಂದು ಕಂಡು ಬಂದಿದ್ದರಿಂದ ಪ್ರಮಾಣವಚನ ಬೋದಿಸಿಲ್ಲ.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**

ಅಮ್ಮ ಹೋಗುವುದಕ್ಕಿಂತ ಮೊದಲು ನಾನು, ಅಮ್ಮ, ಪಪ್ಪ ಕೋಣನೂರಿನಲ್ಲಿ ಮನೆಯಲ್ಲಿ ಇರುತ್ತಿದ್ದೆವು. ಅಮ್ಮನಿಗೆ ಏನಾಯಿತು ಎಂದರೆ ನನಗೆ ಗೊತ್ತಿಲ್ಲ. ನಾನು, ಅಪ್ಪ, ಅಮ್ಮ ಮನೆಯಲ್ಲಿದ್ದಾಗ ಏನಾಯಿತು ನನಗೆ ಗೊತ್ತಿಲ್ಲ. ಅಪ್ಪ ಅಮ್ಮ ಮನೆಯಲ್ಲಿದ್ದಾಗ ಚೆನ್ನಾಗಿರುತ್ತಿದ್ದರು. ಅಮ್ಮನಿಗೆ ಏನಾಗಿದೆ, ಎಲ್ಲಿ ಹೋಗಿದ್ದಾಳೆ ನನಗೆ ಏನೂ ಗೊತ್ತಿಲ್ಲ. ಅಮ್ಮನಿಗೆ ಯಾರು ಏನು ಮಾಡಿದರು ನನಗೆ ಗೊತ್ತಿಲ್ಲ. ಸುಮಮ್ಮನ ಊರು ಬೆಣ್ಣೆಹಳ್ಳಿ. ಈಗ ನ್ಯಾಯಾಲಯದಲ್ಲಿ ಕುಳಿತಿರುವ ಅಜ್ಜ ಗೊತ್ತು. ಆತನ ಹೆಸರು ಕರಿಯಜ್ಜ. ಅಮ್ಮ ಅಪ್ಪ ಹೋದ ನಂತರ ನಾನು ಮಾಳಪ್ಪನಹಟ್ಟಿಯಲ್ಲಿ ಅಜ್ಜಿ ತಾತನ ಜೊತೆಗೆ ಇರುತ್ತಿದ್ದೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ
ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.